ಸಿಸಿ ಸಂಖ್ಯೆ: 756/2022
ಡಿಡಬ್ಲ್ಯೂ: 01
ದಿನಾಂಕ: 28.06.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಎಸ್ ಕೆ ಎ ರವರಿಂದ.**

ನಾನು ಪ್ರಮಾಣಪತ್ರದ ಮೂಲಕ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು, ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ಶಿಗ್ಗಾಂವ ಪೋಲಿಸ್ ಠಾಣೆಗೆ ನಾನು ನೀಡಿರುವ ದೂರಿನ ಎರಡು ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳ ಮೇಲೆ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಇರುವುದಿಲ್ಲ ಅವುಗಳನ್ನು ಅಂಚೆ ಮೂಲಕ ಕಳುಹಿಸಿರುವುದಾಗಿ ಹೇಳಿದ್ದರಿಂದ ತಕರಾರಿಗೆ ಒಳಪಟ್ಟು ಅವುಗಳನ್ನು ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು.

ನಾಲ್ಕು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-4 ರಿಂದ 7 ಎಂದು ಗುರುತಿಸಲಾಯಿತು.

ಮೂರು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-8 ರಿಂದ 10 ಎಂದು ಗುರುತಿಸಲಾಯಿತು.

ನನ್ನ ಆರೋಗ್ಯದ ಕುರಿತು ಚಿಕಿತ್ಸೆ ಪಡೆದ ಕುರಿತು ಆಸ್ಪತ್ರೆಯ ಸಂಪೂರ್ಣ ಪೈಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-11 ಎಂದು ಗುರುತಿಸಲಾಯಿತು.

ಶಿಗ್ಗಾಂವ ನ್ಯಾಯಾಲಯದ ಖಾಸಗಿ ಪಿರ್ಯಾದಿ ನಂ.13/2019 ರ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-12 ಎಂದು ಗುರುತಿಸಲಾಯಿತು.

ಪಿಸಿ ನಂ.13/2019 ರಲ್ಲಿಯ ಪಿರ್ಯಾದಿದಾರನ ಸ್ವ ಹೇಳಿಕೆ ಪ್ರಮಾಣಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-13 ಎಂದು ಮತ್ತು ದಾಖಲೆಗಳ ದೃಡಿಕೃತ ನಕಲುಗಳನ್ನು ನಿಡಿ-14 ರಿಂದ 17 ಎಂದು ಗುರುತಿಸಲಾಯಿತು.

ಪಿಸಿ ನಂ.13/2019 ರ ಪಿರ್ಯಾದಿದಾರನ ನೋಟಿಸಿಗೆ ನೀಡಿದ ಉತ್ತರದ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-18 ಎಂದು ಮತ್ತು ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-19 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಪಿರ್ಯಾದಿದಾರರ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.